# ಬಾಗಲಕೋಟೆ

# ಜಿಲ್ಲೆಯ ಸಂಕ್ಷಿಪ್ತ

# ಪಕ್ಷಿನೋಟ

## ಜಿಲ್ಲೆಯ ಕಿರು ಪರಿಚಯ

ಬಾಗಲಕೋಟ ಜಿಲ್ಲೆಯ ಉಪನಿರ್ದೇಶಕರು ಸಾ.ಶಿ. ಕಚೇರಿಯು 1997 ರಲ್ಲಿ ವಿಜಾಪೂರ ಜಿಲ್ಲೆಯಿಂದ ಬಾಗಲಕೋಟ ಜಿಲ್ಲೆಯು ಪ್ರತ್ಯೇಕಿಸಲ್ಪಟ್ಟು ದಿನಾಂಕ:22-06-1998 ರಿಂದ ಅಸ್ತಿತ್ವಕ್ಕೆ ಬಂದಿದ್ದು, 9 ಕಂದಾಯ ವಲಯಗಳಿವೆ ವಲಯಕ್ಕೆ ಒಂದರಂತೆ ಶಿಕ್ಷಣವಲಯಗಳಿದ್ದು ಆಯಾ ವಲಯದ ಶೈಕ್ಷಣಿಕ ಉಸ್ತುವಾರಿಯಾಗಿ ತಾಲೂಕಿಗೆ ಒಂದರಂತೆ ಕ್ಷೇತ್ರ ಶಿಕ್ಷಣಾಧಿಕಾರಿಗಳಿದ್ದು ಉಪನಿರ್ದೇಶಕರು ಜಿಲ್ಲೆಯ ಶೈಕ್ಷಣಿಕ ಕಾರ್ಯಕ್ರಮಗಳ ಅನೇಕ ಯೋಜನೆಗಳ ಅನುಷ್ಠಾನ ಅಧಿಕಾರಿಗಳಾಗಿದ್ದು ಜಿಲ್ಲೆಯು ಶೈಕ್ಷಣಿಕ ಕ್ಷೇತ್ರದಲ್ಲಿ ಪ್ರಗತಿ ಸಾಧಿಸಿದೆ. ಜಿಲ್ಲೆಯ ಆಡಳಿತ ಅನುಕೂಲಕ್ಕಾಗಿ ಬಾದಾಮಿ, ಬಾಗಲಕೋಟ, ಬೀಳಗಿ, ಹುನಗುಂದ, ಜಮಖಂಡಿ, ಮುಧೋಳ ಹಾಗೂ ಹೊಸದಾಗಿ ಮೂರು ತಾಲೂಕಗಳಾದ ಗುಳೇದಗುಡ್ಡ, ರಬಕವಿ-ಬನಹಟ್ಟಿ ಹಾಗೂ ಇಲಕಲ್ ರಚನೆಯಾಗಿರುವುದರಿಂದ ಒಟ್ಟು ಒಂಬತ್ತು ತಾಲೂಕುಗಳನ್ನಾಗಿ ವಿಂಗಡಿಸಿದ್ದು, 07 ವಿಧಾನಸಭಾ ಮತಕ್ಷೇತ್ರ, 01 ವಿಧಾನ ಪರಿಷತ್ ಕ್ಷೇತ್ರ, 01 ಸಂಸದರನ್ನು ಹಾಗೂ 36 ಜಿಲ್ಲಾ ಪಂಚಾಯತ ಸದಸ್ಯರನ್ನು ಹೊಂದಿದೆ. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದ ಶೈಕ್ಷಣಿಕ ಆಡಳಿತದ ಅನುಕೂಲಕ್ಕಾಗಿ **6** ಕ್ಷೇತ್ರ ಶಿಕ್ಷಣಾಧಿಕಾರಿಗಳ ವಲಯಗಳಿದ್ದು, ಹೊಸದಾಗಿ ಮೂರು ತಾಲೂಕಗಳಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿಗಳು ಮಂಜೂರಾಗಿರುತ್ತವೆ.

ಬಾಗಲಕೋಟ ಜಿಲ್ಲೆಯು ಐತಿಹಾಸಿಕವಾಗಿ ಮೌರ್ಯರು,ಶಾತವಾಹನರು,ಕದಂಬರು,ಬಾದಾಮಿ ಚಾಲುಕ್ಯರು,ರಾಷ್ಟ್ರಕೂಟರು,ದೇವಗಿರಿಯ ಯಾದವರು ಮತ್ತು ದ್ವಾರಸಮುದ್ರದ ಹೊಯ್ಸಳರು,ವಿಜಯನಗರದ ಅರಸರು,ಬಿಜಾಪೂರದ ಆದಿಲ್‌ಶಾಹಿಗಳ ಆಳ್ವಿಕೆಗೆ ಒಳಪಟ್ಟಿತ್ತು. ಭಾರತೀಯ ಶಿಲ್ಪಕಲೆಯ ತೊಟ್ಟಿಲು ಎನಿಸಿರುವ ಐಹೊಳೆಯು,ಬಾಗಲಕೋಟ ಜಿಲ್ಲೆಯ ಬಾದಾಮಿ ತಾಲೂಕಿಗೆ ಸೇರಿದ ಐಹೊಳೆ ಚಾಲುಕ್ಯ ವಾಸ್ತುಶಿಲ್ಪದ ಒಂದು ದೊಡ್ಡ ಕೇಂದ್ರ ವಾಗಿತ್ತು.

ಬಾಗಲಕೋಟೆ ಜಿಲ್ಲೆಯಲ್ಲಿ ಹರಿಯುವ 3 ನದಿಗಳಾದ ಕೃಷ್ಣಾ,ಘಟಪ್ರಭಾ ಮತ್ತು ಮಲಪ್ರಭಾ ನದಿಗಳು ಮಳೆಗಾಲದಲ್ಲಿ ತುಂಬಿ ಹರಿಯುತ್ತವೆ. ಕೃಷ್ಣಾ ನದಿಯು ಅತೀ ದೊಡ್ಡ ನದಿಯಾಗಿದ್ದು,ಹುನಗುಂದ ತಾಲೂಕಿನ ಕೂಡಲಸಂಗಮದಲ್ಲಿ(ಬಸವಣ್ಣನವರ ಐಕ್ಯ ಸ್ಥಾನವೆಂದು ಹೇಳಲಾದ)ಕೃಷ್ಣಾ ನದಿ ಹಾಗೂ ಮಲಪ್ರಭಾ ನದಿಗಳು ಸೇರುತ್ತವೆ. ಈ ಜಲಾಶಯಕ್ಕೆ ಬಸವ ಸಾಗರವೆಂದು ಕರೆಯಲಾಗುತ್ತಿದೆ.

ಸನ್ 2011 ರ ಜನಗಣತಿಯ ಪ್ರಕಾರ ಜಿಲ್ಲೆಯ ಸಾಕ್ಷರತಾ ಪ್ರಮಾಣ 79.23 ರಷ್ಟು ಪುರುಷ ಸಾಕ್ಷರರು 58.40 ರಷ್ಟು ಮಹಿಳಾ ಸಾಕ್ಷರರು ಒಟ್ಟು 68.82 ರಷ್ಟು ಸಾಕ್ಷರತೆಯನ್ನು ಹೊಂದಿದೆ.

# ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರ ಕಾರ್ಯಾಲಯ ಬಾಗಲಕೋಟ

**Office No:08354-235112** **Email.ID:- ddpi.edu.karbgk@nic.in**
**FaxNo: 08354-236168** **ddpibgk01@gmail.com**

1) ಉಪನಿರ್ದೇಶಕರ ಕಛೇರಿಯ ಸಿಬ್ಬಂದಿ ವಿವರ.

| ಕ್ರಸಂ | ಹುದ್ದೆಯ ವಿವರ | ಮಂಜೂರಿ | ಕಾರ್ಯನಿರ್ವಹಿಸುತ್ತಿರುವ | ಖಾಲಿ |
|---|---|---|---|---|
| 1 | ಉಪನಿರ್ದೇಶಕರು (ಆಡಳಿತ) | 1 | 1 | 0 |
| 2 | ಶಿಕ್ಷಣಾಧಿಕಾರಿಗಳು | 1 | 1 | 0 |
| 3 | ಡಿವೈಪಿಸಿ ಎಸ್‌ಎಸ್‌ಎ ಬಾಗಲಕೋಟ | 1 | 0 | 1 |
| 4 | ಡಿವೈಪಿಸಿ ಆರ್‌ಎಂಎಸ್‌ಎ ಬಾಗಲಕೋಟ | 1 | 1 | 0 |
| 5 | ಶಿಕ್ಷಣಾಧಿಕಾರಿಗಳು (ಮ.ಉ.ಯೋ) | 1 | 1 | 0 |
| 6 | ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿಗಳು | 1 | 0 | 1 |
| 7 | ವಿಷಯ ಪರಿವೀಕ್ಷಕರು | 5 | 3 | 2 |
| 8 | ಎಪಿಸಿ | 3 | 3 | 0 |
| 9 | ವೃತ್ತಿ ವಿಷಯ ಪರಿವೀಕ್ಷಕರು | 1 | 0 | 1 |
| 10 | ಶಿಕ್ಷಣ ಸಂಯೋಜಕರು (ಉರ್ದು) | 1 | 1 | 0 |
| 11 | ವ್ಯವಸ್ಥಾಪಕರು | 1 | 1 | 0 |
| 12 | ಅಧೀಕ್ಷಕರು | 3 | 3 | 0 |
| 13 | ಸಹಾಯಕ ಸಾಂಖ್ಯಿಕ ಅಧಿಕಾರಿಗಳು | 1 | 1 | 0 |
| 14 | ಪ್ರ.ದ.ಸ | 8 | 7 | 1 |
| 15 | ದ್ವಿ.ದ.ಸ | 3 | 3 | 0 |
| 16 | ಶೀಘ್ರಲಿಪಿಗಾರರು | 1 | 0 | 1 |
| 17 | ವಾಹನ ಚಾಲಕರು | 1 | 1 | 0 |
| 18 | ಬೆರಳಚ್ಚುಗಾರ | 2 | 1 | 1 |
| 19 | ‘ಡಿ’ ದರ್ಜೆ | 8 | 8 | 0 |
| | ಒಟ್ಟು | 44 | 36 | 08 |

2)ಶಾಲೆಗಳ ವಿವರ:–

| ಶಾಲೆಗಳ ವಿಧ | ಪ್ರಾಥಮಿಕ | ಪ್ರೌಢ | ಒಟ್ಟು |
|---|---|---|---|
| ಸರ್ಕಾರಿ | 1303 | 183 | 1486 |
| ಸಮಾಜ ಕಲ್ಯಾಣ ಇಲಾಖೆ | 39 | 19 | 58 |
| ಸ್ಥಳೀಯ ಸಂಸ್ಥೆ/ಇತರೆ | 0 | 1 | 1 |
| ಅನುದಾನಿತ | 113 | 124 | 237 |
| ಅನುದಾನ ರಹಿತ | 466 | 142 | 608 |
| ಸೆಂಟ್ರಲ್ | 2 | 2 | 4 |
| ಒಟ್ಟು | 1923 | 471 | 2394 |

2) ಮಕ್ಕಳ ವಿವರ (ಕೆಡಿಪಿ):– ಅಕ್ಟೋಬರ 2017

| ತರಗತಿ | ಮಕ್ಕಳ ದಾಖಲಾತಿ | ಹಾಜರಾತಿ | ಶೇ.ಹಾಜರಿ |
|---|---|---|---|
| 1 ರಿಂದ 5 | 202272 | 192364 | 95.10 |
| 6 ರಿಂದ 8 | 112546 | 105257 | 93.52 |
| 9 ರಿಂದ 10 | 63127 | 61203 | 96.95 |
| 1 ರಿಂದ 10 | 377945 | 358824 | 94.94 |

3) ಶಿಕ್ಷಕರ ಹುದ್ದೆಗಳು ಮಂಜೂರಿ ಮತ್ತು ಖಾಲಿ ಹುದ್ದೆಗಳ ವಿವರ:–

| ವಿವರ | ಮಂಜೂರಿ | ಕಾರ್ಯನಿರ್ವಹಿಸುತ್ತಿರವವರು | ಖಾಲಿ |
|---|---|---|---|
| ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರು | 7551 | 6414 | 1137 |
| ಸರ್ಕಾರಿ ಪ್ರೌಢ ಶಾಲಾ ಶಿಕ್ಷಕರು | 1598 | 1409 | 189 |
| ಒಟ್ಟು | 9149 | 7823 | 1326 |

4) 2017–18 ನೇ ಸಾಲಿನಲ್ಲಿ ಸರಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಅತಿಥಿ ಶಿಕ್ಷಕರ ನೇಮಕಾತಿ:–

1) ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ 1137 ಹುದ್ದೆಗಳಲ್ಲಿ 678 ಅತಿಥಿ ಶಿಕ್ಷಕರ ನೇಮಕಾತಿ ಮಾಡಲಾಗಿದೆ.
2) ಸರಕಾರಿ ಪ್ರೌಢ ಶಾಲೆಗಳಲ್ಲಿ ಖಾಲಿ ಇರುವ 189 ಹುದ್ದೆಗಳಲ್ಲಿ 64 ಅತಿಥಿ ಶಿಕ್ಷಕರ ನೇಮಕಾತಿ ಮಾಡಲಾಗಿದೆ.

5) ಸನ್ 2017–18 ನೇ ಸಾಲಿಗೆ ಪದವಿಧರ ಪ್ರಾಥಮಿಕ ಶಾಲಾ ಶಿಕ್ಷಕರು (ಎಜಿಟಿ) 392 ಹುದ್ದೆಗಳನ್ನು ಭರ್ತಿ ಮಾಡುವ ಕುರಿತು ಸರ್ಕಾರಿ ಹಂತದಲ್ಲಿರುತ್ತದೆ.

6) ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಫಲಿತಾಂಶ ವಿವರ.

| ವರ್ಷ | ಪರೀಕ್ಷೆಗೆ ಕುಳಿತವರು | ಉತ್ತೀರ್ಣರಾದವರು | ಪ್ರತಿಶತ ಸಾಧನೆ | ರಾಜ್ಯ ಮಟ್ಟದ ರ್‍ಯಾಂಕ |
|---|---|---|---|---|
| 2015–16 | 25362 | 20880 | 86.72 | 7 |
| 2016–17 | 26805 | 17258 | 64.38 | 33 |

**7) ಸಾಧನೆ:**

1) **ಪ್ರತಿಭಾ ಕಾರಂಜಿ:** 2017–18 ನೇ ಸಾಲಿನಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ನಡೆದ ಪ್ರತಿಭಾ ಕಾರಂಜಿಯ ಇಂಗ್ಲೀಷ ಭಾಷಣ ಸ್ಪರ್ಧೆಯಲ್ಲಿ ರಾಜ್ಯಕ್ಕೆ ಬಾಗಲಕೋಟ ಜಿಲ್ಲೆಯು ದ್ವಿತಿಯ ಸ್ಥಾನ ಪಡೆದಿರುತ್ತದೆ.
2) **ಚಿತ್ರ ಕಲೆ:** 2017–18 ನೇ ಸಾಲಿನಲ್ಲಿ ಚಿತ್ರಕಲೆ ವಿಭಾಗದಲ್ಲಿ '2025 ಕರ್ನಾಟಕ ವಿಷನ್' ಜೂನಿಯರ್ ಹಾಗೂ ಸಿನಿಯರ್ ವಿಭಾಗದಲ್ಲಿ ಸ್ಪರ್ಧೆ ನಡೆಸಿದ್ದು ಜಿಲ್ಲೆಗೆ ಜೂನಿಯರ್ ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದಿದ್ದಾರೆ. ಹಾಗೂ ಸಿನಿಯರ್ ವಿಭಾಗದಲ್ಲಿ ರಾಜ್ಯ ಮಟ್ಟದಲ್ಲಿ ದ್ವಿತಿಯ ಸ್ಥಾನ ಬಾಗಲಕೋಟ ಜಿಲ್ಲೆಗೆ ಬಂದಿರುತ್ತದೆ.
3) **ವೃತ್ತಿ ಶಿಕ್ಷಣ:** ಶೈಕ್ಷಣಿಕ ಹಾಗೂ ಮಕ್ಕಳ ವೃತ್ತಿ ಶಿಕ್ಷಣ ಕಲಿಕೋತ್ಸವದಲ್ಲಿ ಬಾಗಲಕೋಟ ಜಲ್ಲೆಯಿಂದ 1) ಹೊಲಿಗೆ 2) ಸಾಮಾಜಿಕ ಉಪಯುಕ್ತ ಉತ್ಪಾದನಾ ಕಾರ್ಯ 3) ಕೃಷಿ 4) ರೇಷ್ಮೆ 5) ತೋಟಗಾರಿಕೆ ಈ ವಿಭಾಗಗಳಲ್ಲಿ ಮೂರನೇ ಸ್ಥಾನವನ್ನು ಪಡೆದಿರುತ್ತಾರೆ.